ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 31-12-2004.

# *ಈ ವರ್ಷದ ಆರಂಭದಿಂದ ಬೇಹದ್ದಿನ ವೈರಾಗ್ಯ ವೃತ್ತಿಯನ್ನು ಪ್ರತ್ಯಕ್ಷ ಮಾಡಿಕೊಳ್ಳಿರಿ -ಇದೇ ಮುಕ್ತಿಧಾಮದ ದ್ವಾರದ ಬೀಗದ ಕೈಯಾಗಿದೆ*

(इस वर्ष के आरम्भ से बेहद का वैराग्य इमर्ज करो, यही मुक्तिधाम के गेट की चाबी है)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ನವಯುಗ ರಚಯಿತ ಬಾಪ್‌ದಾದಾ ತನ್ನ ಮಕ್ಕಳೊಂದಿಗೆ ಹೊಸ ವರ್ಷವನ್ನು ಆಚರಿಸಲು ಬಂದಿದ್ದಾರೆ. ಪರಮಾತ್ಮ ಮಿಲನವನ್ನು ಮಾಡುವುದಕ್ಕಾಗಿ ಬಂದಿರುವ ಮಕ್ಕಳ ಸ್ನೇಹದಲ್ಲಿ ತನ್ನ ದೂರದೇಶದಿಂದ ಸಾಕಾರವತನದಲ್ಲಿ ಮಿಲನ ಮಾಡಲು ಬಾಪ್‌ದಾದಾ ಬಂದಿದ್ದಾರೆ. ಪ್ರಪಂಚದಲ್ಲಿ ಹೊಸ ವರ್ಷದ ಶುಭಾಶಯಗಳನ್ನು ಒಬ್ಬಿಬ್ಬರಿಗೆ ಹೇಳುತ್ತಾರೆ ಆದರೆ ಬಾಪ್‌ದಾದಾ ಮಕ್ಕಳಿಗೆ ನವಯುಗ ಹಾಗೂ ಹೊಸ ವರ್ಷ ಎರಡರ ಶುಭಾಶಯಗಳನ್ನು ನೀಡುತ್ತಿದ್ದಾರೆ. ಹೊಸವರ್ಷವನ್ನು ಒಂದುದಿನ ಆಚರಿಸುತ್ತಾರೆ. ನವಯುಗವನ್ನು ನೀವು ಸಂಗಮದಲ್ಲಿ ಸದಾ ಆಚರಿಸುತ್ತೀರಿ. ನೀವೆಲ್ಲರೂ ಪರಮಾತ್ಮನ ಪ್ರೀತಿಯ ಆಕರ್ಷಣೆಯಲ್ಲಿ ಸೆಳೆಯುತ್ತಾ ಇಲ್ಲಿಗೆ ತಲುಪಿದ್ದೀರಿ ಆದರೆ ಎಲ್ಲರಿಗಿಂತ ದೂರದೇಶದಿಂದ ಬಂದಿರುವಂತಹವರು ಯಾರು? ಡಬಲ್ ವಿದೇಶಿಯರೇ? ಅವರಂತೂ ಸಾಕಾರ ದೇಶದಲ್ಲಿ ಇರುತ್ತಾರೆ ಆದರೆ ಬಾಪ್‌ದಾದಾ ದೂರದೇಶಿ ಎಷ್ಟು ದೂರದಿಂದ ಬಂದಿದ್ದಾರೆ? ಎಷ್ಟು ಮೈಲುಗಳಿಂದ ಬಂದಿದ್ದಾರೆಂದು ಲೆಕ್ಕ ತೆಗೆಯಲು ಸಾಧ್ಯವೇ? ದೂರದೇಶಿ ಬಾಪ್‌ದಾದಾ ನಾಲ್ಕೂ ಕಡೆಯ ಮಕ್ಕಳನ್ನು ಸಮ್ಮುಖದಲ್ಲಿ ಡೈಮಂಡ್ ಹಾಲಿನಲ್ಲಿ ಕುಳಿತಿರುವವರನ್ನು ಅಥವಾ ಮಧುಬನದಲ್ಲಿ ಕುಳಿತಿರುವವರು, ಜ್ಞಾನಸರೋವರದಲ್ಲಿ ಕುಳಿತಿರುವವರು,

ಗ್ಯಾಲರಿಯಲ್ಲಿ ಕುಳಿತಿರುವವರು, ಎಲ್ಲರ ಜೊತೆ, ದೂರ ಕುಳಿತಿರುವ ದೇಶ-ವಿದೇಶದಲ್ಲಿ ಎಲ್ಲರ ಜೊತೆ ಬಾಪ್‌ದಾದಾ ಮಿಲನ ಮಾಡುತ್ತಿದ್ದಾರೆ. ಬಾಪ್‌ದಾದಾ ನೋಡುತ್ತಿದ್ದಾರೆ - ಎಲ್ಲರೂ ದೂರದಿಂದಲೂ ಎಷ್ಟು ಪ್ರೀತಿಯಿಂದ ನೋಡುತ್ತಿದ್ದಾರೆ ಹಾಗೂ ಕೇಳುತ್ತಿದ್ದಾರೆ. ಆದ್ದರಿಂದ ನಾಲ್ಕೂ ಕಡೆಯ ಮಕ್ಕಳಿಗೆ ನವಯುಗ ಹಾಗೂ ಹೊಸ ವರ್ಷದ ಪದಮಾಗುಣ ಶುಭಾಶಯಗಳು, ಶುಭಾಶಯಗಳು, ಶುಭಾಶಯಗಳು. ಮಕ್ಕಳಿಗಂತೂ ನವಯುಗ ಕಣ್ಣುಗಳ ಮುಂದೆ ಇದೆಯಲ್ಲವೇ! ಈ ದಿನ ಸಂಗಮದಲ್ಲಿ ಇದ್ದೀರಿ, ನಾಳೆ ನವಯುಗದಲ್ಲಿ ರಾಜ್ಯಾಧಿಕಾರಿಯಾಗಿ ರಾಜ್ಯವನ್ನು ಮಾಡುತ್ತೀರಿ. ಇಷ್ಟು ಸಮೀಪತೆಯ ಅನುಭವವನ್ನು ಮಾಡುತ್ತಿದ್ದೀರಾ? ಇದು ಇಂದು ಮತ್ತು ನಾಳೆಯ ಮಾತಾಗಿದೆ. ನಿನ್ನೆ ಇತ್ತು ನಾಳೆ ಮತ್ತೆ ಬರುತ್ತದೆ. ತಮ್ಮ ನವಯುಗದ ಸ್ವರ್ಣಿಮಯುಗದ ಸ್ವರ್ಣಿಮ ಉಡುಪು ನಿಮ್ಮ ಮುಂದೆ ಕಾಣುತ್ತಿದೆಯೇ? ಎಷ್ಟು ಸುಂದರವಾಗಿದೆ. ಸ್ಪಷ್ಟವಾಗಿ ಕಾಣುತ್ತಿದೆಯಲ್ಲವೇ. ಇಂದು ಸಾಧಾರಣ ಉಡುಪಿನಲ್ಲಿ ನಾಳೆ ನವಯುಗದ ಸುಂದರ ಉಡುಪಿನಲ್ಲಿ ಹೊಳೆಯುತ್ತಾ ಕಾಣುತ್ತೀರಿ. ನವವರ್ಷದಲ್ಲಿ ಒಂದು ದಿನಕ್ಕೋಸ್ಕರ ಒಬ್ಬಿಬ್ಬರಿಗೆ ಉಡುಗೊರೆಯನ್ನು ಕೊಡುತ್ತಾರೆ ಆದರೆ ನವಯುಗ ರಚಯಿತ ಬಾಪ್‌ದಾದಾ ನಿಮ್ಮೆಲ್ಲರಿಗೂ ಸ್ವರ್ಣಿಮ ಪ್ರಪಂಚದ ಉಡುಗೊರೆಯನ್ನು ನೀಡಿದ್ದಾರೆ. ಅದು ಅನೇಕ ಜನ್ಮಗಳು ನಡೆಯುವಂತಹದ್ದು. ವಿನಾಶಿ ಉಡುಗೊರೆ ಅಲ್ಲ. ಅವಿನಾಶಿ ಉಡುಗೊರೆ, ತಂದೆ ತನ್ನ ಮಕ್ಕಳಿಗೆ ನೀಡಿದ್ದಾರೆ. ನೆನಪಿದೆಯಲ್ಲವೇ! ಯಾರೂ ಮರೆತಿಲ್ಲವೇ. ಸೆಕೆಂಡಿನಲ್ಲಿ ಬಂದು ಹೋಗಬಹುದು. ಈಗೀಗ ಸಂಗಮದಲ್ಲಿ, ಈಗೀಗ ತಮ್ಮ ಸ್ವರ್ಣಿಮ ಪ್ರಪಂಚಕ್ಕೆ(ಸತ್ಯಯುಗ) ತಲುಪಲು ಸಮಯ ಹಿಡಿಯುತ್ತದೆಯೇ? ತಮ್ಮ ರಾಜ್ಯದ ಸ್ಮೃತಿ ಇರಲಿ, ಸ್ಮೃತಿ ಬರುತ್ತದೆಯಲ್ಲವೇ!

ಈ ದಿನವನ್ನು ವಿದಾಯಿ (ಬೀಳ್ಕೊಡಿಗೆ)ಯ ದಿನ ಎಂದು ಹೇಳಲಾಗುತ್ತದೆ ಹಾಗೂ 12 ಗಂಟೆಯ ನಂತರ ಶುಭಾಶಯಗಳ ದಿನವಾಗುತ್ತದೆ. ಆದ್ದರಿಂದ ಬೀಳ್ಕೊಡುಗೆಯ ದಿನ ವರ್ಷದ ಬೀಳ್ಕೊಡುಗೆಯ ಜೊತೆ-ಜೊತೆಗೆ ತಾವೆಲ್ಲರೂ ವರ್ಷದ ಜೊತೆ ಬೇರೆ ಯಾವುದನ್ನು ಬೀಳ್ಕೊಡುತ್ತೀರಿ? ಚೆಕ್ ಮಾಡಿಕೊಳ್ಳಿ ಸದಾ ಕಾಲಕ್ಕೋಸ್ಕರ ಬೀಳ್ಕೊಟ್ಟಿದ್ದೀರಾ ಅಥವಾ ಸ್ವಲ್ಪ ಸಮಯಕ್ಕೋಸ್ಕರ ನೀಡಿದ್ದೀರಾ? ಬಾಪ್‌ದಾದಾ ಹಿಂದೆಯೂ ತಿಳಿಸಿದ್ದರು ಸಮಯದ ವೇಗ ತೀವ್ರ ಗತಿಯಿಂದ ಹೋಗುತ್ತಿದೆ, ಆದ್ದರಿಂದ ಇಡೀ ವರ್ಷದ ಫಲಿತಾಂಶವನ್ನು ಚೆಕ್ ಮಾಡಿಕೊಳ್ಳಿರಿ - ನನ್ನ ಪುರುಷಾರ್ಥದ ವೇಗ ತೀವ್ರವಾಗಿದೆಯೇ? ಅಥವಾ ಹೇಗೆಂದರೆ ಹಾಗೆ ಇರುತ್ತದೆಯೇ? ಪ್ರಪಂಚದಲ್ಲಿ ಪರಿಸ್ಥಿತಿಯನ್ನು ನೋಡುತ್ತಾ ಈಗ ತಮ್ಮ ವಿಶೇಷ ಎರಡು ಸ್ವರೂಪಗಳನ್ನು ಪ್ರತ್ಯಕ್ಷ ಮಾಡಿಕೊಳ್ಳಿರಿ. ಈ ಎರಡು ಸ್ವರೂಪಗಳಾಗಿವೆ - ಒಂದು ಸರ್ವರ ಪ್ರತಿ ದಯಾ ಹೃದಯಿ ಹಾಗೂ ಕಲ್ಯಾಣಕಾರಿ ಮತ್ತು ಎರಡನೆಯದು ಪ್ರತಿಯೊಂದು ಆತ್ಮನ ಪ್ರತಿ ಸದಾ ದಾತನ ಮಗು ಮಾಸ್ಟರ್ ದಾತಾ. ವಿಶ್ವದ ಆತ್ಮರು ಶಕ್ತಿಹೀನ, ದುಃಖ, ಅಶಾಂತಿಯಿಂದ ಚೀರುತ್ತಿದ್ದಾರೆ. ತಂದೆಯ ಮುಂದೆ, ಪೂಜ್ಯ ಆತ್ಮರಾದ ನಿಮ್ಮ ಮುಂದೆ ಮೊರೆ ಇಡುತ್ತಿದ್ದಾರೆ - ಸ್ವಲ್ಪ ಸಮಯಕ್ಕಾದರೂ ಸುಖವನ್ನು ನೀಡಿ, ಶಾಂತಿಯನ್ನು ನೀಡಿ, ಖುಷಿಯನ್ನು ನೀಡಿ, ಧೈರ್ಯವನ್ನು ನೀಡಿ ಎಂದು. ತಂದೆಯಂತೂ ಮಕ್ಕಳ ದುಃಖ, ಕಷ್ಟಗಳನ್ನು ನೋಡಲು ಆಗುವುದಿಲ್ಲ, ಕೇಳಲು ಆಗುವುದಿಲ್ಲ. ಪೂಜ್ಯ ಆತ್ಮರಾದ ನಿಮ್ಮೆಲ್ಲರಿಗೂ ದಯೆ ಬರುತ್ತದೆಯೇ? ಕೊಡಿ, ಕೊಡಿ, ಕೊಡಿ........ಎಂದು ಎಲ್ಲರೂ ಬೇಡುತ್ತಿದ್ದಾರೆ ಆದ್ದರಿಂದ ದಾತನ ಮಕ್ಕಳು ಸ್ವಲ್ಪ ಅಂಚಲಿಯನ್ನಾದರೂ ನೀಡಿ. ತಂದೆಯೂ ಸಹ ಮಕ್ಕಳನ್ನು ಜೊತೆಗಾರರನ್ನಾಗಿ ಮಾಡಿಕೊಂಡು, ಮಾಸ್ಟರ್ ದಾತನನ್ನಾಗಿ ಮಾಡಿ, ತಮ್ಮ ರೈಟ್ ಹ್ಯಾಂಡಾಗಿ ಮಾಡಿಕೊಂಡು ಇದೇ ಸಂಕೇತವನ್ನು ನೀಡುತ್ತಾರೆ - ವಿಶ್ವದ ಎಲ್ಲಾ ಆತ್ಮರಿಗೂ ಮುಕ್ತಿಯನ್ನು ಕೊಡಿಸಬೇಕು,

ಮುಕ್ತಿಧಾಮಕ್ಕೆ ಹೋಗಬೇಕು, ಆದ್ದರಿಂದ ಹೇ! ದಾತನ ಮಕ್ಕಳೇ ತಮ್ಮ ಶ್ರೇಷ್ಠ ಸಂಕಲ್ಪದಿಂದ ಮನಸಾ ಶಕ್ತಿಯಿಂದ, ವಾಣಿಯಿಂದಾದರೂ, ಸಂಬಂಧ-ಸಂಪರ್ಕದಿಂದಾದರೂ ಶುಭಭಾವನೆ, ಶುಭಕಾಮನೆಯಿಂದಾದರೂ, ತರಂಗಗಳ(ಕಿರಣಗಳು) ವಾಯುಮಂಡಲದ ಮೂಲಕವಾದರೂ ಯಾವುದಾದರೂ ಯುಕ್ತಿಯಿಂದ ಮುಕ್ತಿಯನ್ನು ನೀಡಿ. ಮುಕ್ತಿಯನ್ನು ಕೊಡಿ ಎಂದು ಚೀರುತ್ತಿದ್ದಾರೆ, ದಯೆ ತೋರಿಸಿ ಎಂದು ಬಾಪ್‌ದಾದಾ ತಮ್ಮ ರೈಟ್ ಹ್ಯಾಂಡ್ಗಳಿಗೆ ಹೇಳುತ್ತಾರೆ.

ಇಲ್ಲಿಯವರೆಗೂ ಲೆಕ್ಕವನ್ನು ತೆಗೆಯಿರಿ. ಮೆಗಾ ಪ್ರೋಗ್ರಾಂ ಮಾಡಿದ್ದೀರಿ, ಸಮ್ಮೇಳನಗಳನ್ನು ಮಾಡಿದ್ದೀರಿ, ಭಾರತದಲ್ಲಿ ಅಥವಾ ವಿದೇಶದಲ್ಲಿ ಸೇವಾಕೇಂದ್ರಗಳನ್ನು ತೆರೆದಿದ್ದೀರಿ ಆದರೆ ಒಟ್ಟು ವಿಶ್ವದ ಆತ್ಮರ ಸಂಖ್ಯೆಯ ಲೆಕ್ಕದಲ್ಲಿ ಎಷ್ಟು % ಆತ್ಮರಿಗೆ ಮುಕ್ತಿಯ ದಾರಿಯನ್ನು ತೋರಿಸಿದ್ದೀರಿ? ಕೇವಲ ಭಾರತದ ಕಲ್ಯಾಣಕಾರಿಯೋ ಅಥವಾ ವಿದೇಶದ 5 ಖಂಡಗಳ, ಎಲ್ಲೆಲ್ಲಿ ಸೇವಾಕೇಂದ್ರಗಳನ್ನು ತೆರೆದಿದ್ದೀರೋ ಅಲ್ಲಿಯ ಕಲ್ಯಾಣಕಾರಿಗಳೋ ಅಥವಾ ವಿಶ್ವದ ಕಲ್ಯಾಣಕಾರಿಗಳೋ? ವಿಶ್ವದ ಕಲ್ಯಾಣ ಮಾಡುವುದಕ್ಕೋಸ್ಕರ ಪ್ರತಿಯೊಬ್ಬ ಮಗು ತಂದೆಯ ರೈಟ್ ಹ್ಯಾಂಡ್ ಆಗಬೇಕು. ಯಾರಿಗೆ ಏನೇ ಕೊಟ್ಟರೂ ಯಾವುದರಿಂದ ಕೊಡುತ್ತಾರೆ? ಕೈಗಳಿಂದಲೇ ನೀಡುತ್ತಾರಲ್ಲವೇ. ಆದ್ದರಿಂದ ಬಾಪ್‌ದಾದಾರವರಿಗೆ ನೀವು ಕೈಗಳಾಗಿದ್ದೀರಾ? ಬಾಪ್‌ದಾದಾ ರೈಟ್ ಹ್ಯಾಂಡ್ಸನ್ನು ಕೇಳುತ್ತಿದ್ದಾರೆ - ಎಷ್ಟು % ಕಲ್ಯಾಣ ಮಾಡಿದ್ದೀರಿ? ಲೆಕ್ಕ ತೆಗೆದು ತಿಳಿಸಿ? ಪಾಂಡವರು ಲೆಕ್ಕ ಮಾಡುವುದರಲ್ಲಿ ಚತುರರಲ್ಲವೇ. ಆದ್ದರಿಂದ ಬಾಪ್‌ದಾದಾ ಹೇಳುತ್ತಾರೆ - ಈಗ ಸ್ವ ಪುರುಷಾರ್ಥ ಹಾಗೂ ಸೇವೆಯ ಭಿನ್ನ-ಭಿನ್ನ ವಿಧಿಗಳಿಂದ ಪುರುಷಾರ್ಥವನ್ನು ತೀವ್ರ ಮಾಡಿಕೊಳ್ಳಿರಿ. ಸ್ವ ಸ್ಥಿತಿಯಲ್ಲೂ ವಿಶೇಷ ನಾಲ್ಕು ವಿಷಯಗಳನ್ನು ಚೆಕ್(ಪರಿಶೀಲನೆ) ಮಾಡಿಕೊಳ್ಳಿರಿ - ಇದಕ್ಕೇ ತೀವ್ರಪುರುಷಾರ್ಥ ಎಂದು ಹೇಳಲಾಗುತ್ತದೆ.

ಒಂದು ಮಾತೇನೆಂದರೆ ಮೊದಲು ಇದನ್ನು ಪರಿಶೀಲನೆ ಮಾಡಿಕೊಳ್ಳಿರಿ - ನಿಮಿತ್ತ ಭಾವವಿದೆಯೇ? ಯಾವುದೇ ರಾಯಲ್ ರೂಪದ ನಾನು ಎಂಬುದು ಇಲ್ಲವೇ? ನನ್ನತನವು ಇಲ್ಲವೇ? ಸಾಧಾರಣ ವ್ಯಕ್ತಿಗಳ ನಾನು ಮತ್ತು ನನ್ನದೂ ಎಂಬುದು ಸಾಧಾರಣವಾಗಿರುತ್ತದೆ, ದೊಡ್ಡರೂಪದಲ್ಲಿ ಇರುತ್ತದೆ ಆದರೆ ಬ್ರಾಹ್ಮಣ ಜೀವನದ ನಾನು ಮತ್ತು ನನ್ನ ತನವು ಬಹಳ ಸೂಕ್ಷ್ಮ ಮತ್ತು ರಾಯಲ್ ಆಗಿದೆ. ಅಂತಹವರ ಭಾಷೆಯು ಹೇಗಿರುತ್ತದೆ ಎಂದು ತಿಳಿದಿದೆಯೇ? ಇದಂತೂ ನಡೆಯುತ್ತದೆ, ಇದಂತೂ ಆಗುತ್ತದೆ. ನಡೆಯುತ್ತಿದ್ದೇವೆ, ನೋಡುತ್ತಿದ್ದೇವೆ....... ಎನ್ನುತ್ತಿದ್ದೀರಿ ಎಂದರೆ ಪ್ರತಿಯೊಂದು ವಿಷಯದಲ್ಲಿ ನಿಮಿತ್ತ ಭಾವವಿದೆಯೇ? ಪ್ರತಿಯೊಂದು ವಿಷಯದಲ್ಲಿ ನಿಮಿತ್ತ ಭಾವವಿದೆಯೇ! ಭಲೆ ಸೇವೆಯಲ್ಲಿ ಇರಬಹುದು, ಸ್ಥಿತಿಯಲ್ಲಿ ಇರಬಹುದು ಅಥವಾ ಸಂಬಂಧ-ಸಂಪರ್ಕದಲ್ಲಿ ಇರಬಹುದು, ಚಲನೆ ಮತ್ತು ಚಹರೆಯು ನಿಮಿತ್ತ ಭಾವದ್ದಾಗಿರಲಿ. ಮತ್ತು ಅವರ ವಿಶೇಷತೆಯು ಇದೂ ಸಹ ಇರುತ್ತದೆ - ನಿಮಿತ್ತ ಭಾವ, ನಿರ್ಮಾನ ಭಾವ. ನಿಮಿತ್ತ ಮತ್ತು ನಿರ್ಮಾನಭಾವದಿಂದ ನವಯುಗದ ನಿರ್ಮಾಣ ಮಾಡಿ ಅಂದಾಗ ಮೂರು ಮಾತುಗಳನ್ನು ಕೇಳಿದಿರಿ - ನಿಮಿತ್ತ, ನಿರ್ಮಾನ ಮತ್ತು ನಿರ್ಮಾಣ ಹಾಗೂ ನಾಲ್ಕನೆಯ ಮಾತಾಗಿದೆ - ನಿರ್ವಾಣ. ಯಾವಾಗ ಬೇಕೋ ಆಗ ನಿರ್ವಾಣಧಾಮಕ್ಕೆ ತಲುಪಿಬಿಡಿ. ನಿರ್ವಾಣ ಸ್ಥಿತಿಯಲ್ಲಿ ಸ್ಥಿತರಾಗಿ ಏಕೆಂದರೆ ಸ್ವಯಂ ನಿರ್ವಾಣ ಸ್ಥಿತಿಯಲ್ಲಿ ಇದ್ದಾಗ ಅನ್ಯರನ್ನೂ ನಿರ್ವಾಣಧಾಮಕ್ಕೆ ತಲುಪಿಸಬಲ್ಲಿರಿ. ಈಗ ಎಲ್ಲರೂ ಮುಕ್ತಿಯನ್ನು ಬಯಸುತ್ತಾರೆ. ನಮ್ಮನ್ನು ಮುಕ್ತ ಮಾಡಿ

ಮುಕ್ತ ಮಾಡಿ ಎಂದು ಚೀರಾಡುತ್ತಿದ್ದಾರೆ, ಆದ್ದರಿಂದ ಈ ನಾಲ್ಕೂ ವಿಷಯಗಳು ಒಳ್ಳೆಯ %ನಲ್ಲಿ ಪ್ರತ್ಯಕ್ಷ ಜೀವನದಲ್ಲಿ ಇವೆ ಎಂದರೆ ಅವರು ತೀವ್ರಪುರುಷಾರ್ಥಿಗಳೆಂದರ್ಥ. ಆಗಲೇ ವಾಹ್! ಮಕ್ಕಳೇ ವಾಹ್! ಎಂದು ಬಾಪ್‌ದಾದಾ ಹೇಳುತ್ತಿದ್ದಾರೆ. ವಾಹ್! ಬಾಬಾ ವಾಹ್! ವಾಹ್! ಡ್ರಾಮಾ ವಾಹ್! ಪುರುಷಾರ್ಥವೇ ವಾಹ್! ಎಂದು ತಾವೂ ಹೇಳುತ್ತಿದ್ದೀರಿ ಆದರೆ ಏನು ಮಾಡುತ್ತೀರಿ ಎಂದು ತಿಳಿದಿದೆಯೇ? ತಿಳಿದಿದೆಯೇ? ಕೆಲವೊಮ್ಮೆ ವಾಹ್ ಎಂದು ಹೇಳುತ್ತೀರಿ ಇನ್ನೂ ಕೆಲವೊಮ್ಮೆ ವೈ (ಏಕೆ?) ಎಂದು ಹೇಳುತ್ತೀರಿ. ವಾಹ್‌ನ ಬದಲು ವೈ ಮತ್ತು ವೈಯಿಂದ ಹಾಯ್ (ಅಯ್ಯೋ) ಆಗಿಬಿಡುತ್ತದೆ. ಅಂದಾಗ ಈಗ ವೈ ಅಲ್ಲ ವಾಹ್ ಎನ್ನಿರಿ. ತಮಗೂ ಸಹ ಯಾವುದು ಇಷ್ಟವಾಗುತ್ತದೆ. ವಾಹ್ ಎನ್ನುವುದೋ ವೈ ಎನ್ನುವುದೋ? ಯಾವುದು ಇಷ್ಟವಾಗುತ್ತದೆ? ವಾಹ್! ವಾಹ್ ಅಲ್ಲವೇ. ಎಂದೂ ವೈ ಎನ್ನುವುದಿಲ್ಲವೇ? ತಪ್ಪಾಗಿ ಬಂದು ಬಿಡುತ್ತದೆಯಲ್ಲವೇ!

ಡಬಲ್ ವಿದೇಶಿಯರು ವೈ, ವೈ ಎಂದು ಹೇಳುತ್ತೀರಾ? ಹೇಳುತ್ತೀರಾ? ಕೆಲ-ಕೆಲವೊಮ್ಮೆ ಹೇಳಿಬಿಡುತ್ತೀರಾ? ಯಾರು ಎಂದಿಗೂ ವೈ ಎಂದು ಹೇಳುವುದಿಲ್ಲವೋ ಅವರು ಕೈಯನ್ನು ಎತ್ತಿರಿ, ಡಬಲ್ ವಿದೇಶಿಯರು ಮಾತ್ರ. ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ಒಳ್ಳೆಯದು ಭಾರತವಾಸಿಯರು ಯಾರು ವಾಹ್! ವಾಹ್! ಎನ್ನುವ ಬದಲು ಏಕೆ, ಏನು ಎನ್ನುತ್ತೀರೋ ಅವರು ಕೈಯನ್ನು ಎತ್ತಿರಿ. ಏಕೆ? ಏನು? ಎನ್ನುತ್ತೀರಾ? ನಿಮಗೆ ಯಾರು ಅನುಮತಿ ಕೊಟ್ಟರು? ಸಂಸ್ಕಾರಗಳೇ? ಹಳೆಯ ಸಂಸ್ಕಾರ ತಮಗೆ ವೈನ ಅನುಮತಿ ಕೊಟ್ಟಿದೆ ಮತ್ತು ತಂದೆಯು - ವಾಹ್!ವಾಹ್! ಎನ್ನಿರಿ, ವೈ? ವೈ? ಅಲ್ಲ ಎಂದು ಹೇಳುತ್ತಾರೆ. ಹಾಗಾದರೆ ಈ ಹೊಸ ವರ್ಷದಲ್ಲಿ ಏನು ಮಾಡುತ್ತೀರಿ? ವಾಹ್!ವಾಹ್! ಎನ್ನುವಿರಾ? ಅಥವಾ ಕೆಲ-ಕೆಲವೊಮ್ಮೆ ವೈ ಎನ್ನುವುದಕ್ಕೆ ಅನುಮತಿ ಕೊಡುವುದೇ? ವೈ ಎನ್ನುವುದು ಒಳ್ಳೆಯದಲ್ಲ. ಹೇಗೆ ವಾಹ್! ವಾಹ್! ಎನ್ನುವುದು ಎಷ್ಟು ಚೆನ್ನಾಗಿದೆ. ಹಾ! ಹೇಳಿ ವಾಹ್! ವಾಹ್! ವಾಹ್!

ಒಳ್ಳೆಯದು. ದೂರದೇಶದಲ್ಲಿ ಮಕ್ಕಳು ಕೇಳುತ್ತಿದ್ದಾರೆ, ನೋಡುತ್ತಿದ್ದಾರೆ, ಭಾರತದಲ್ಲಿ ಹಾಗೂ ವಿದೇಶದಲ್ಲಿ ಇರುವ ಎಲ್ಲಾ ಮಕ್ಕಳೊಂದಿಗೂ ಕೇಳುತ್ತೇವೆ, ವಾಹ್! ವಾಹ್! ಎನ್ನುತ್ತೀರೋ ವೈ? ವೈ? ಎನ್ನುತ್ತೀರೋ. ಈಗ ಬೀಳ್ಕೊಡುಗೆಯ ದಿನವಾಗಿದೆಯಲ್ಲವೇ! ಇಂದು ವರ್ಷದ ಬೀಳ್ಕೊಡುಗೆಯ ಕೊನೆಯ ದಿನವಾಗಿದೆ, ಆದ್ದರಿಂದ ಎಲ್ಲರೂ ಈಗಿನಿಂದ ವೈ? ಎನ್ನುವುದಿಲ್ಲ, ಆಲೋಚನೆಯನ್ನೂ ಮಾಡುವುದಿಲ್ಲ ಎಂದು ಸಂಕಲ್ಪ ಮಾಡಿ. ಪ್ರಶ್ನಾರ್ಥಕ ಚಿಹ್ನೆ ಅಷ್ಟೇ ಅಲ್ಲ. ಆಶ್ಚರ್ಯದ ಚಿಹ್ನೆಯು ಇರಬಾರದು, ಕೇವಲ ಬಿಂದುವನ್ನಿಡಿ. ಪ್ರಶ್ನಾರ್ಥಕ ಚಿಹ್ನೆಯನ್ನು ನೋಡಿ ಎಷ್ಟೊಂದು ಅಂಕು-ಡೊಂಕಾಗಿದೆ ಮತ್ತು ಬಿಂದುವು ಎಷ್ಟು ಸಹಜವಾಗಿದೆ. ಕೇವಲ ನಯನಗಳಲ್ಲಿ ಬಿಂದುವಾದ ತಂದೆಯನ್ನು ಸಮಾವೇಶ ಮಾಡಿಕೊಳ್ಳಿರಿ. ಹೇಗೆ ನಯನಗಳಲ್ಲಿ ನೋಡುವ ಬಿಂದು (ಪಾಪೆ) ಸಮಾವೇಶವಾಗಿದೆಯಲ್ಲವೇ! ಹಾಗೆಯೇ ಸದಾ ನಯನಗಳಲ್ಲಿ ಬಿಂದುವಾದ ತಂದೆಯನ್ನು ಸಮಾವೇಶ ಮಾಡಿಕೊಳ್ಳಿರಿ. ಸಮಾವೇಶ ಮಾಡಿಕೊಳ್ಳಲು ಬರುತ್ತದೆಯಲ್ಲವೇ? ಅಥವಾ ಅದನ್ನು ಅಳವಡಿಸಲು ಆಗುವುದಿಲ್ಲ, ಮೇಲೆ-ಕೆಳಗೆ ಆಗಿಬಿಡುತ್ತದೆಯೇ? ಅಂದಾಗ ಏನು ಮಾಡುತ್ತೀರಿ? ಯಾವುದಕ್ಕೆ ಬೀಳ್ಕೊಡಿಗೆ ನೀಡುತ್ತೀರಿ? ಏಕೆ ಎನ್ನುವುದಕ್ಕೆ ಬೀಳ್ಕೊಡಿಗೆ ನೀಡುತ್ತೀರಾ? ಎಂದೂ ಸಹ ಆಶ್ಚರ್ಯಕ ಚಿಹ್ನೆಯೂ ಸಹ ಬರಬಾರದು. ಇದು ಹೇಗೆ! ಹೀಗೂ ಆಗುತ್ತದೆಯೇ? ಹೀಗಾಗಬಾರದಿತ್ತು, ಏಕೆ ಆಗುತ್ತದೆ! ಈ ರೀತಿ ಪ್ರಶ್ನಾರ್ಥಕ ಚಿಹ್ನೆ ಅಷ್ಟೇ ಅಲ್ಲ. ಆಶ್ಚರ್ಯದ ಚಿಹ್ನೆಯೂ ಇರಬಾರದು. ಕೇವಲ ತಂದೆ ಮತ್ತು ನಾನು. ಇದಂತೂ

ನಡದೇ ನಡೆಯುತ್ತದೆ ಎಂದು ಕೆಲವು ಮಕ್ಕಳು ಹೇಳುತ್ತಾರೆ. ಬಾಪ್‌ದಾದಾರವರಿಗೆ ವಾರ್ತಾಲಾಪದಲ್ಲಿ ಬಹಳ ರಮಣೀಕ ಮಾತುಗಳನ್ನು ಹೇಳುತ್ತಾರೆ. ಸನ್ಮುಖದಲ್ಲಂತೂ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಬಾಪ್‌ದಾದಾರವರಿಗೆ ವಾರ್ತಾಲಾಪದಲ್ಲಿ ಎಲ್ಲವನ್ನು ಹೇಳಿಬಿಡುತ್ತಾರೆ. ಒಳ್ಳೆಯದು. ಏನಾದರೂ ನಡೆಯಲಿ ಆದರೆ ತಾವು ನಡೆಯಬಾರದು, ತಾವಂತೂ ಈಗ ಹಾರಬೇಕಾಗಿದೆ, ಅಂದಮೇಲೆ ನಡೆಯುವ ಮಾತುಗಳನ್ನೇಕೆ ನೋಡುತ್ತೀರಿ, ತಾವೂ ಹಾರಿ ಮತ್ತು ಎಲ್ಲರನ್ನು ಹಾರಿಸಿ. ಶುಭಭಾವನೆ, ಶುಭಕಾಮನೆಯು ಇಷ್ಟು ಶಕ್ತಿಶಾಲಿಯಾಗಿದೆ, ಈ ಶುಭಭಾವನೆ, ಶುಭಕಾಮನೆಯ ಹೊರತು ನಡುವೆ ಯಾವುದೇ ವೈ? ಬರಬಾರದು. ಹಾಗಾದರೆ ಇಷ್ಟು ಶಕ್ತಿಶಾಲಿಯಾಗಿದ್ದೀರಾ - ಯಾವ ಅಶುಭಭಾವನೆಯುಳ್ಳವರನ್ನೂ ಸಹ ಶುಭಭಾವನೆಯಲ್ಲಿ ಪರಿವರ್ತಿಸಲು ಆಗುತ್ತದೆಯೇ! ಒಂದುವೇಳೆ ಪರಿವರ್ತಿಸಲು ಸಾಧ್ಯವಿಲ್ಲವೆಂದರೆ ಎರಡನೆಯದು ತಮ್ಮ ಶುಭಭಾವನೆ-ಶುಭಕಾಮನೆಯ ಅವಿನಾಶಿಯಾಗಿದೆಯೇ! ಕೆಲ-ಕೆಲವೊಮ್ಮೆ ಅಲ್ಲ, ಅವಿನಾಶಿಯಾಗಿದ್ದರೆ ತಮ್ಮ ಮೇಲೆ ಅಶುಭಭಾವನೆಯ ಪ್ರಭಾವವು ಬೀಳಲು ಸಾಧ್ಯವಿಲ್ಲ ಆದರೆ ಪ್ರಶ್ನೆಗಳಲ್ಲಿ ಹೊರಟು ಹೋಗುತ್ತೀರಿ - ಇದು ಏಕಾಗುತ್ತಿದೆ? ಇದು ಎಲ್ಲಿಯವರೆಗೆ ನಡೆಯುತ್ತದೆ, ಹೇಗೆ ನಡೆಯುತ್ತದೆ? ಇದರಿಂದ ಶುಭಭಾವನೆಯ ಶಕ್ತಿಯು ಕಡಿಮೆಯಾಗಿಬಿಡುತ್ತದೆ. ವಾಸ್ತವದಲ್ಲಿ ಶುಭಭಾವನೆ, ಶುಭಕಾಮನೆಯ ಸಂಕಲ್ಪ ಶಕ್ತಿಯಲ್ಲಿ ಬಹಳ ಶಕ್ತಿಯಿದೆ. ನೋಡಿ - ತಾವೆಲ್ಲರೂ ಬಾಪ್‌ದಾದಾರವರ ಬಳಿ ಬಂದಿರಿ. ಮೊದಲನೆಯ ದಿನವನ್ನು ನೆನಪು ಮಾಡಿಕೊಳ್ಳಿರಿ, ಬಾಪ್‌ದಾದಾ ಏನು ಮಾಡಿದರು? ಪತಿತರೇ ಬರಲಿ, ಪಾಪಿಗಳೇ ಬರಲಿ, ಸಾಧರಣರೇ ಬರಲಿ, ಭಿನ್ನ-ಭಿನ್ನ ವೃತ್ತಿಯವರು ಬಂದರು ಆದರೂ ಸಹ ಬಾಪ್‌ದಾದಾ ಏನು ಮಾಡಿದರು? ಶುಭಭಾವನೆಯನ್ನೇ ಇಟ್ಟರಲ್ಲವೇ! ಎಲ್ಲರೂ ನನ್ನವರಾಗಿದ್ದೀರಿ, ಮಾಸ್ಟರ್ ಸರ್ವ ಶಕ್ತಿವಂತರಾಗಿದ್ದೀರಿ, ಹೃದಯಸಿಂಹಾಸನಗಳಾಗಿದ್ದೀರಿ - ಈ ಶುಭಭಾವನೆ, ಶುಭಕಾಮನೆಯನ್ನೇ ಇಟ್ಟರು ಆದ್ದರಿಂದಲೇ ಎಲ್ಲರೂ ತಂದೆಯ ಮಕ್ಕಳಾಗಿಬಿಟ್ಟಿರಿ. ಹೇ! ಪಾಪಿಗಳೇ ಏಕೆ ಬಂದಿರಿ ಎಂದು ತಂದೆಯು ಹೇಳಲಿಲ್ಲ. ನನ್ನ ಮಕ್ಕಳು ಮಾಸ್ಟರ್ ಸರ್ವಶಕ್ತಿವಂತ ಮಕ್ಕಳು ಎನ್ನುವ ಶುಭಭಾವನೆಯನ್ನು ಇಟ್ಟರು. ಯಾವಾಗ ತಂದೆಯೇ ತಮ್ಮೆಲ್ಲರ ಮೇಲೆ ಶುಭಭಾವನೆ, ಶುಭಕಾಮನೆಯನ್ನು ಇಟ್ಟಿದ್ದರೆಂದಮೇಲೆ ತಮ್ಮೆಲ್ಲರ ಹೃದಯವು ಏನು ಹೇಳಿತು? ನನ್ನ ಬಾಬಾ ಎಂದು ಹೇಳಿತು. ನಾವೂ ಸಹ ನನ್ನ ಮಕ್ಕಳೇ ಎಂದು ಹೇಳಿದೆವು. ಇದೇ ರೀತಿ ಒಂದುವೇಳೆ ತಾವೆಲ್ಲರೂ ಸಹ ಶುಭಭಾವನೆ, ಶುಭಕಾಮನೆಯನ್ನು ಇಟ್ಟುಕೊಂಡು ನಡೆಯುತ್ತೀರೆಂದರೆ ಎಲ್ಲರೂ ಹೇಗೆ ಕಾಣುವವರು? ನನ್ನ ಕಲ್ಪದ ಹಿಂದಿನ ಮಧುರ ಸಹೋದರನಾಗಿದ್ದಾರೆ, ಇವರು ನನ್ನ ಪ್ರಿಯ ಸಹೋದರಿಯಾಗಿದ್ದಾರೆ ಎನ್ನುವ ದೃಷ್ಟಿಯಲ್ಲಿ ಎಲ್ಲರೂ ಕಾಣುತ್ತಾರೆ ಆಗ ಪರಿವರ್ತನೆಯಾಗಿಬಿಡುತ್ತದೆ.

ಅಂದಮೇಲೆ ಈ ವರ್ಷದಲ್ಲಿ ಏನಾದರೂ ಮಾಡಿ ತೋರಿಸಿ, ಕೇವಲ ಕೈಯನ್ನು ಎತ್ತಬೇಡಿ. ಕೈ ಎತ್ತುವುದು ಬಹಳ ಸಹಜ, ಆದರೆ ಮನಸ್ಸಿನ ಕೈಯನ್ನು ಎತ್ತಿರಿ, ಬಹಳಷ್ಟು ಸೇವೆ ಏಕೆ ಉಳಿದಿದೆ? ಬಾಪ್‌ದಾದಾ ನೋಡುತ್ತಿರುತ್ತಾರೆ- ವಿಶ್ವದ ಆತ್ಮರ ಮೇಲೆ ಬಹಳ ದಯೆ ಬರುತ್ತದೆ. ಈಗ ಪ್ರಕೃತಿಯೂ ಸಹ ಬೇಸತ್ತಿದೆ. ಸ್ವಯಂ ಪ್ರಕೃತಿಯೇ ಬೇಸತ್ತಿದೆ ಎಂದರೆ ಏನು ಮಾಡುವುದು? ಆತ್ಮರಿಗೆ ತೊಂದರೆ ನೀಡುತ್ತಿದೆ. ಆದ್ದರಿಂದ ತಂದೆಗೆ ಮಕ್ಕಳನ್ನು ನೋಡಿ ಅನುಕಂಪ(ದಯೆ) ಬರುತ್ತದೆ. ತಮ್ಮೆಲ್ಲರಿಗೆ ದಯೆ ಬರುತ್ತಿಲ್ಲವೇ? ಕೇವಲ ಸಮಾಚಾರವನ್ನು ಕೇಳಿ ಇಷ್ಟೊಂದು ಆತ್ಮರು ಹೊರಟು ಹೋದರು ಎಂಬುದನ್ನು ಕೇಳಿ ಸುಮ್ಮನಾಗಿಬಿಡುತ್ತೀರಿ. ಆ ಆತ್ಮರು ಸಂದೇಶದಿಂದಂತೂ ವಂಚಿತರಾದರು ಆದ್ದರಿಂದ ಈಗ ದಾತರಾಗಿ, ದಯಾಹೃದಯಿಗಳಾಗಿ. ಈ ವರ್ಷದ ಆರಂಭದಿಂದ ತಮ್ಮಲ್ಲಿ ಬೇಹದ್ದಿನ ವೈರಾಗ್ಯ

ವೃತಿಯನ್ನು ಪ್ರತ್ಯಕ್ಷ ಮಾಡಿಕೊಳ್ಳಿರಿ. ಆಗಲೇ ಎಲ್ಲರ ಮೇಲೆ ದಯೆ ಮೂಡುತ್ತದೆ. ಕೇವಲ ವೈರಾಗ್ಯ ವೃತ್ತಿ ಅಲ್ಲ ಬೇಹದ್ದಿನ ವೈರಾಗ್ಯ ವೃತ್ತಿ. ಈ ದೇಹದ, ದೇಹ ಬಾನದ ಸ್ಮೃತಿಯೂ ಸಹ ಬೇಹದ್ದಿನ ವೈರಾಗ್ಯಕ್ಕೆ ಕೊರತೆಯಾಗಿದೆ. ಚಿಕ್ಕ-ಚಿಕ್ಕ ಮಿತವಾದ ಮಾತುಗಳು ಸ್ಥಿತಿಯನ್ನು ಏರು-ಪೇರು ಮಾಡುತ್ತವೆ, ಕಾರಣ? ಬೇಹದ್ದಿನ ವೈರಾಗ್ಯ ವೃತ್ತಿಯು ಕಡಿಮೆ ಇದೆ, ಸೆಳತವಿದೆ. ವೈರಾಗ್ಯವಿಲ್ಲ. ಸೆಳೆತವಿದೆ. ಯಾವಾಗ ಸಂಪೂರ್ಣ ಬೇಹದ್ದಿನ ವೈರಾಗಿಗಳಾಗಿಬಿಡುತ್ತೀರೋ, ವೃತ್ತಿಯಲ್ಲಿಯೂ ವೈರಾಗ್ಯ, ದೃಷ್ಟಿ, ಸಂಬಂಧ-ಸಂಪರ್ಕ, ಸೇವೆ ಎಲ್ಲದರಲ್ಲೂ ಬೇಹದ್ದಿನ ವೈರಾಗಿಗಳಾಗಿ...... ಆಗ ಮುಕ್ತಿಧಾಮದ ಬಾಗಿಲು ತೆರೆಯುವುದು. ಈಗಂತೂ ಯಾವ ಆತ್ಮರು ಬರುತ್ತಿದ್ದಾರೆಯೋ ಅವರೆಲ್ಲರೂ ಮತ್ತೆ ಜನ್ಮ ತೆಗೆದುಕೊಳ್ಳುತ್ತಾರೆ ಮತ್ತೆ ದುಃಖಿ ಆಗುತ್ತಾರೆ. ಈಗ ಮುಕ್ತಿಧಾಮದ ಬಾಗಿಲನ್ನು ತೆರೆಯಲು ತಾವೇ ನಿಮಿತ್ತರಾಗಿದ್ದೀರಲ್ಲವೇ? ಬ್ರಹ್ಮಾ ತಂದೆಯ ಜೊತೆಗಾರರಾಗಿದ್ದೀರಲ್ಲವೇ! ಅಂದಾಗ **ಬೇಹದ್ದಿನ ವೈರಾಗ್ಯ ವೃತ್ತಿಯೇ ಪರಂಧಾಮದ ಬಾಗಿಲನ್ನು ತೆರೆಯುವ ಕೀಲಿ ಕೈಯಾಗಿದೆ.** ಈಗಿನ್ನೂ ಕೀಲಿಯನ್ನು ಹಾಕಿಲ್ಲ, ಅದನ್ನು ಇನ್ನೂ ತಯಾರು ಮಾಡಿಯೇ ಇಲ್ಲ. ಬ್ರಹ್ಮಾತಂದೆಯೂ ಸಹ ಕಾಯುತ್ತಿದ್ದಾರೆ. ಅಡ್ವಾನ್ಸ್ ಪಾರ್ಟಿಯೂ ಸಹ ನಿರೀಕ್ಷಣೆ ಮಾಡುತ್ತಿದೆ, ಪ್ರಕೃತಿಯೂ ನೋಡುತ್ತಿದೆ, ಬಹಳ ಬೇಸತ್ತಿದೆ. ಮಾಯೆಯೂ ಕೂಡ ತನ್ನ ದಿನಗಳನ್ನು ಎಣಿಕೆ ಮಾಡುತ್ತಿದೆ. ಈಗ ಹೇಳಿ ಮಾಸ್ಟರ್ ಸರ್ವ ಶಕ್ತಿವಂತರೇ ಹೇಳಿ ಏನು ಮಾಡುವಿರಿ?

ಈ ವರ್ಷದಲ್ಲಿ ಯಾವುದಾದರೂ ನವೀನತೆಯನ್ನು ಮಾಡಿ ತೋರಿಸುತ್ತೀರಲ್ಲವೇ! ಹೊಸ ವರ್ಷವೆಂದು ಹೇಳುತ್ತೀರಿ ಅಂದಮೇಲೆ ನವೀನತೆಯನ್ನು ಮಾಡುತ್ತೀರಲ್ಲವೇ! ಈಗ ಬೇಹದ್ದಿನ ವೈರಾಗ್ಯದ, ಮುಕ್ತಿಧಾಮಕ್ಕೆ ಹೋಗುವ ಕೀಲಿಕೈಯನ್ನು ತಯಾರು ಮಾಡಿಕೊಳ್ಳಿರಿ. ತಾವೆಲ್ಲರೂ ಸಹ ಮೊದಲು ಮುಕ್ತಿಧಾಮಕ್ಕೆ ಹೋಗಬೇಕಾಗಿದೆಯಲ್ಲವೇ! ಬ್ರಹ್ಮಾತಂದೆಯೊಂದಿಗೆ ಪ್ರತಿಜ್ಞೆ ಮಾಡಿದ್ದೀರಿ – ಜೊತೆಯಲ್ಲಿಯೇ ನಡೆಯುತ್ತೇವೆ, ಜೊತೆಯಲ್ಲಿಯೇ ಬರುತ್ತೇವೆ, ಜೊತೆಯಲ್ಲಿಯೇ ರಾಜ್ಯ ಮಾಡುತ್ತೇವೆ, ಜೊತೆಯಲ್ಲಿಯೇ ಭಕ್ತಿ ಮಾಡುತ್ತೇವೆ ಅಂದಮೇಲೆ ಈಗ ತಯಾರಿ ಮಾಡಿಕೊಳ್ಳಿರಿ, ಈ ವರ್ಷದಲ್ಲಿ ಮಾಡುತ್ತೀರಾ ಅಥವಾ ಇನ್ನೊಂದು ವರ್ಷವು ಬೇಕಾ? ಈ ವರ್ಷದಲ್ಲಿ ಮಾಡಿಯೇ ಮಾಡುತ್ತೇವೆ ಎಂದು ಯಾರು ತಿಳಿಯುವಿರೋ ಅವರು ಕೈಯನ್ನು ಎತ್ತಿರಿ. ಮಾಡುತ್ತೀರಾ? ಮಾಡಿದ್ದೇ ಅದರೆ ಅಡ್ವಾನ್ಸ್ ಪಾರ್ಟಿಯವರು ತಮಗೆ ಬಹಳ ಶುಭಾಶಯಗಳನ್ನು ಹೇಳುವರು, ಅವರೂ ಸಹ ದಣಿದಿದ್ದಾರೆ. ಒಳ್ಳೆಯದು, ಶಿಕ್ಷಕಿ ಸಹೋದರಿಯರು ಏನು ಹೇಳುತ್ತೀರಿ? ಮೊದಲನೇ ಸಾಲಿನವರು ಏನು ಹೇಳುತ್ತೀರಿ? ಮೊದಲನೇ ಸಾಲಿನ ಪಾಂಡವರು ಮತ್ತು ಶಕ್ತಿಯರು, ಯಾರು ಮಾಡುವಿರೋ ಮೊದಲು ಕೈಯನ್ನು ಎತ್ತಿರಿ. ಅರ್ಧ ಅಲ್ಲ. ಅರ್ಧ ಎತ್ತಿದರೆ ಅರ್ಧ ಮಾಡುತ್ತೀರಿ ಎಂದು ಹೇಳಿದ ಹಾಗೆ, ಆದ್ದರಿಂದ ಸಂಪೂರ್ಣವಾಗಿ ಕೈಯನ್ನು ಎತ್ತಿರಿ. ಒಳ್ಳೆಯದು. ಶುಭಾಶಯಗಳು, ಶುಭಾಶಯಗಳು. ಡಬಲ್ ವಿದೇಶಿಗಳಿಂದಲೂ ಕೈಯನ್ನು ಎತ್ತಿಸುತ್ತೇವೆ. ಡಬಲ್ ವಿದೇಶಿಯರೇ ಪರಸ್ಪರ ಯಾರು ಎತ್ತಿಲ್ಲವೋ ನೋಡಿಕೊಳ್ಳಿರಿ. ಒಳ್ಳೆಯದು. ಈ ಸಿಂಧಿ ಗ್ರೂಪಿನವರೂ ಸಹ ಕೈಯನ್ನು ಎತ್ತುತ್ತಿದ್ದಾರೆ, ಚಮತ್ಕಾರವಾಗಿದೆ. ಸಿಂಧಿ ಗ್ರೂಪಿನವರೂ ಸಹ ಮಾಡುತ್ತೀರಾ? ಅಂದಾಗ ಡಬಲ್ ಶುಭಾಶಯಗಳು ಬಹಳ ಒಳ್ಳೆಯದು. ಪರಸ್ಪರ ಒಬ್ಬರು ಇನ್ನೊಬ್ಬರಿಗೆ ಜೊತೆಯನ್ನು ಕೊಡುತ್ತಾ, ಶುಭಭಾವನೆ ಇಡುತ್ತಾ ಜೊತೆಯಲ್ಲಿ ಕೈಯಲ್ಲಿ ಕೈಯನ್ನು ಕೊಡುತ್ತಾ ಮಾಡಲೇಬೇಕಾಗಿದೆ. ಒಳ್ಳೆಯದು. (ಸಭೆಯಲ್ಲಿ ಯಾರದೋ ಶಬ್ದವು ಕೇಳಿ ಬಂದಿತು) ಎಲ್ಲರೂ ಕುಳಿತುಕೊಳ್ಳಿ, ಇದು ಹೊಸದೇನಲ್ಲ (ನಥಿಂಗ್ ನ್ಯೂ).

ಈಗೀಗ ಸೆಕೆಂಡಿನಲ್ಲಿ ಬಿಂದು ಆಗಿ ಬಿಂದುವಾಗಿ ತಂದೆಯನ್ನು ನೆನಪು ಮಾಡಿ ಮತ್ತ್ಯಾವುದೇ ವಿಷಯಗಳಿದ್ದರೂ ಸಹ ಅದಕ್ಕೆ ಬಿಂದುವನ್ನಿಡಿ, ಬಿಂದುವನ್ನಿಡಲು ಆಗುತ್ತದೆಯೇ? ಕೇವಲ ಒಂದು ಸೆಕೆಂಡಿನಲ್ಲಿ ನಾನು ತಂದೆಯವನು, ತಂದೆಯು ನನ್ನವರು. ಒಳ್ಳೆಯದು.

**ನಾಲ್ಕಾರೂ ಕಡೆಯ ಸರ್ವಹೊಸ ಯುಗದ ಮಾಲೀಕ ಮಕ್ಕಳಿಗೆ, ನಾಲ್ಕಾರೂ ಕಡೆ ಹೊಸ ವರ್ಷವನ್ನು ಆಚರಿಸುವ ಒಲವು-ಉತ್ಸಾಹದಲ್ಲಿರುವಂತಹ ಮಕ್ಕಳಿಗೆ, ಸದಾ ಹಾರುತ್ತಾ ಇರಬೇಕು ಮತ್ತು ಹಾರಿಸುತ್ತಾ ಇರಬೇಕು - ಇಂತಹ ಹಾರುವಕಲೆಯುಳ್ಳಂತಹ ಮಕ್ಕಳಿಗೆ ಸದಾ ತೀವ್ರಪುರುಷಾರ್ಥದ ಮೂಲಕ ವಿಜಯೀ ಮಾಲೆಯ ಮಣಿಗಳಾಗುವಂತಹ ವಿಜಯೀರತ್ನಗಳಿಗೆ ಬಾಪ್‌ದಾದಾರವರ ಹೊಸವರ್ಷ ಹಾಗೂ ಹೊಸಯುಗದ ಆಶೀರ್ವಾದಗಳ ಜೊತೆಜೊತೆ ಪದಮಗುಣದಷ್ಟು ಶುಭಾಷಯಗಳು-ಶುಭಾಷಯಗಳನ್ನು ತುಂಬಿದ ತಟ್ಟೆಯನ್ನು ಕೊಡುತ್ತಿದ್ದೇವೆ. ಒಂದು ಕೈಯಿಂದ ಚಪ್ಪಾಳೆಯನ್ನು ತಟ್ಟಿರಿ. ಒಳ್ಳೆಯದು.**

ರಿವೈಸ್ ಕೋರ್ಸ್ 31-12-2004.

**ಈ ವರ್ಷದ ಆರಂಭದಿಂದ ಬೇಹದ್ದಿನ ವೈರಾಗ್ಯ ವೃತ್ತಿಯನ್ನು ಪ್ರತ್ಯಕ್ಷ ಮಾಡಿಕೊಳ್ಳಿರಿ- ಇದೇ ಮುಕ್ತಿಧಾಮದ ದ್ವಾರದ ಬೀಗದ ಕೈಯಾಗಿದೆ.**

ಯಾವಾಗ ಪೂರ್ಣವಾಗಿ ಬೇಹದ್ ವೈರಾಗಿಯಾಗುತ್ತಿರೋ ಅರ್ಥಾತ್ ವೃತ್ತಿಯಲ್ಲಿ ಬೇಹದ್ ವೈರಾಗ್ಯ, ದೃಷ್ಟಿಯಲ್ಲಿ ಬೇಹದ್ ವೈರಾಗ್ಯ, ಸಂಬಂಧ ಸಂಪರ್ಕಗಳಲ್ಲಿ ಸೇವೆಯಲ್ಲಿ ಎಲ್ಲದರಲ್ಲಿ ಆಗಬೇಕು ಆಗಲೇ ಮುಕ್ತಿದಾಮದ ದ್ವಾರಗಳು ತೆರೆದುಕೊಳ್ಳುತ್ತವೆ ಮುಕ್ತಿಧಾಮದ ದ್ವಾರಗಳು ತೆರೆಯುವ ಕೀಲಿ ಕೈಯು ಬೇಹದ್ ವೈರಾಗ್ಯ ಎನ್ನುತ್ತಾ ನವಯುಗ ರಚೈತನಾದ ಬಾಪ್‌ದಾದಾ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವರ ಪ್ರತಿ ದಯಾ ಹೃದಯಿಯಾಗಿ ಮತ್ತು ಕಲ್ಯಾಣಕಾರಿಯಾಗಿದ್ದೇನೆ.

2. ನಾನು ಪ್ರತಿಯೊಂದು ಆತ್ಮನ ಪ್ರತಿ ಮಾಸ್ಟರ್ ದಾತನಾಗಿದ್ದೇನೆ.

3. ನನ್ನ ಶುಭ ಸಂಕಲ್ಪದ ಮೂಲಕ, ಮನಸಾ ಶಕ್ತಿಯ ಮೂಲಕ, ವಾಚಾ ಶಕ್ತಿಯ ಮೂಲಕ, ಸಂಬಂಧ ಸಂಪರ್ಕಗಳ ಮೂಲಕ, ಯಾವುದೋ ಒಂದು ಯುಕ್ತಿಯಿಂದ ಆತ್ಮರಿಗೆ ಮುಕ್ತಿಯನ್ನು ಕೊಡುತ್ತಿದ್ದೇನೆ.

4. ವಿಶ್ವ ಕಲ್ಯಾಣ ಮಾಡಲು ಬಾಪ್‌ದಾದಾರವರಿಗೆ ನಾನು ರೈಟ್ ಹ್ಯಾಂಡ್ ಆಗಿದ್ದೇನೆ.

5. ನನ್ನ ಜೀವನದಲ್ಲಿ ನಿಮಿತ್ತ ಭಾವ, ನಿರ್ಮಾನ ಭಾವ, ನಿರ್ಮಾಣ ಭಾವ, ನಿರ್ವಾಣ ಈ ನಾಲ್ಕು ವಿಷಯಗಳನ್ನು ಧಾರಣೆ ಮಾಡಿರುವ ತೀವ್ರಪುರುಷಾರ್ಥಿ.

6. ನಾನು ಯಾವ ಪರಿಸ್ಥಿತಿ ಬಂದರೂ ಏಕೆ ಎನ್ನುವುದಿಲ್ಲ, ಯೋಚಿಸುವುದಿಲ್ಲ, ಪ್ರಶ್ನಾರ್ಥಕವನ್ನು ಇಡುವುದಿಲ್ಲ, ಆಶ್ಚರ್ಯಾರ್ಥಕವನ್ನು ಇಡದೇ ಬಿಂದುವನ್ನು ಮಾತ್ರವೇ ಇಡುತ್ತಿದ್ದೇನೆ.

7. ನಾನು ಶುಭ ಭಾವನೆ ಶುಭಕಾಮನೆಯನ್ನಿಟ್ಟು ಇತರಾತ್ಮರರಿಗೂ ಸಹ ಕಲ್ಪಪೂರ್ವದ ನನ್ನ ಪ್ರೀತಿಯ ಸಹೋದರನು ಅಥವಾ ಸಹೋದರಿ ಎಂಬ ಭಾವನೆಯನ್ನು ತಂದಿದ್ದೇನೆ.

8. ನಾನು ವೃತ್ತಿಯಲ್ಲಿ, ದೃಷ್ಟಿಯಲ್ಲಿ, ಸಂಭಂದ ಸಂಪರ್ಕಗಳಲ್ಲಿ, ಸೇವೆಯಲ್ಲಿ, ಎಲ್ಲದರಲ್ಲಿಯೂ ಬೇಹದ್ ವೈರಾಗಿ ಆಗಿದ್ದೇನೆ.

9. ಮುಕ್ತಿಧಾಮದ ದ್ವಾರಗಳನ್ನು ತೆರೆಯಲು ನಾನು ನಿಮಿತ್ತವಾಗಿದ್ದೇನೆ.

10. ನಾನು ಬ್ರಹ್ಮಾ ತಂದೆಗೆ ಸಹಾಯಕನು.

11. ನಾನು ಬೇಹದ್ ವೈರಾಗ್ಯದಿಂದ ಮುಕ್ತಿಧಾಮದ ಕೀಲಿ ಕೈಯನ್ನು ತಯಾರು ಮಾಡಿಕೊಂಡಿದ್ದೇನೆ.

12. ನಾನು ಪ್ರತಿಯೊಂದು ಕ್ಷಣವನ್ನು, ಪ್ರತಿಯೊಂದು ಸಂಕಲ್ಪವನ್ನು, ಪ್ರತಿಯೊಂದು ಮಾತನ್ನು, ಪ್ರತಿಯೊಂದು ಹೆಜ್ಜೆಯನ್ನು, ಪ್ರತಿಯೊಂದು ವಸ್ತುವನ್ನು ಸಫಲ ಮಾಡಿಕೊಳ್ಳುತ್ತಿದ್ದೇನೆ.

13. ನಾನು ಬಾಪ್‌ದಾದಾರವರಿಂದ ಸಫಲ ಭವ! ಎಂಬ ವರದಾನವನ್ನು ಪಡೆದಿರುವ ಸಫಲತಾ ಮೂರ್ತಿ ಆಗಿದ್ದೇನೆ.

14. ನಾನು ತಂದೆಯವನು ತಂದೆ ನನ್ನವನು.